ಮೂರನೇ ದಿನ 'ಖರಿಮಿಂಡಿಯಾರಿ' ಕ್ಯಾಂಪ್ ತಲುಪಲು ಪ್ರಯಾಣ ಪ್ರಾರಂಭಿಸಿದೆವು. ಸುಮಾರು 500–600 ಮೀಟರ್ ಎತ್ತರಕ್ಕೆ ದೊಡ್ಡ ದೊಡ್ಡ ಮರಗಳ ಕಾಡು ದಾಟಿ ಹುಲ್ಲುಗಾವಲುಗಳ ಗುಡ್ಡಗಳನ್ನು ಏರುತ್ತಾ ಸಾಗಿದೆವು. ಸಾಮಾನ್ಯವಾಗಿ ಸಮುದ್ರ ಮಟ್ಟದಿಂದ 3000 ಮೀಟರ್ ಎತ್ತರದ ನಂತರ ಮರಗಳು ವಿರಳವಾಗುತ್ತಾ ಹೋಗುತ್ತವೆ. ಹಸುರು ಹಾಸಿನ ನಡುವೆ ಬಿಳಿ, ಹಳದಿ, ನೇರಳೆ ಬಣ್ಣಗಳ ಚಿಕ್ಕಚಿಕ್ಕ ಮುದ್ದಾದ ಹೂವುಗಳ ದರ್ಶನ. ವಿವಿಧ ಬಣ್ಣಗಳ ತೊಡುಗೆ ತೊಟ್ಟು ಶಾಲೆಗೆ ಹೋಗುವ ಮುದ್ದಾದ ಮಕ್ಕಳನ್ನು ಹೋಲುವ ಹಾಗೆ ಇವುಗಳನ್ನು ಕಂಡರೆ ಮುದ್ದು ಮೂಡುತ್ತಿತ್ತು. ದೂರದಲ್ಲಿ ಎತ್ತರದ ಗುಡ್ಡವೊಂದು ಬೆಳಿಗ್ಗೆಯಿಂದ ವಿವಿಧ ಕೋನಗಳಲ್ಲಿ ದರ್ಶನ ನೀಡುತ್ತಿತ್ತು.

'ಮೆಕನಸ್‌ಗೋಲ್ಡ್' ಚಿತ್ರದ ಕಣಿವೆಗಳ ನೆನಪನ್ನು ಈ ಕ್ಯಾಂಪ್ ತರುತ್ತಿತ್ತು. ಒಂದು ಕಡೆ ಕಣಿವೆಯಲ್ಲಿ 'ಜೋಪಡಿನಾಲಾ' ನದಿ ಹರಿಯುತ್ತಿತ್ತು. ಮುಂದೆ ಇದು ಬಿಯಾಸ್ ನದಿ ಕೂಡುತ್ತದೆ. ಬಿಯಾಸ್ ನದಿಯ ಆಚೆ ದಡದಲ್ಲಿರುವ ಎತ್ತರವಾದ ಒಂದು ಪರ್ವತ ಪದೇ ಪದೇ ನೋಡುವಷ್ಟು ಕಾಡುತ್ತಿತ್ತು. ಅದು 'ವಸಿಷ್ಠ ಪರ್ವತ'ವೆಂದು ನಂತರ ತಿಳಿಯಿತು. ಕ್ಯಾಂಪಿನಿಂದ ಸ್ವಲ್ಪ ದೂರ, ಸಂಪೂರ್ಣ ನಿಶ್ಶಬ್ದ ವಾತಾವರಣದಲ್ಲಿರುವ, ಧ್ಯಾನ ಮಾಡಲೆಂದೇ ಇದೆಯೇನೋ ಎನ್ನುವಂತಹ ಒಂದು ಬಂಡೆ ಕಾಣಿಸಿತು. ಅದರ ಮೇಲೆ ಕುಳಿತು ಎದುರಿಗಿನ ವಸಿಷ್ಠ ಪರ್ವತವನ್ನು ನೋಡುತ್ತಿದ್ದರೆ, ಸಾಕ್ಷಾತ್ ಶಿವನೇ ತಪಸ್ಸಿಗೆ ಕುಳಿತಂತೆ ಗೋಚರಿಸುತ್ತಿತ್ತು. ಸೂರ್ಯನ ಬೆಳಕು ಮಂದವಾಗುತ್ತಿದ್ದಂತೆ ಸುತ್ತಲಿನ ಪರ್ವತಗಳು ಅವರವರ ಕಲ್ಪನೆಗೆ ತಕ್ಕಂತೆ ಆಕಾರ ಪಡೆಯುತ್ತಿದ್ದವು. ಹಿಮಾಲಯದ ಪ್ರಭಾವವೇ ಹಾಗಿರಬೇಕು, ಇದರ ಆಕರ್ಷಣೆಗೆ ಒಳಗಾಗಿಯೇ ಋಷಿಗಳು ಇಲ್ಲಿ ತಪಸ್ಸು ಮಾಡಲು ಬರುತ್ತಿದ್ದರು ಎನಿಸುತ್ತದೆ.

ಬೆಳಿಗ್ಗೆಯಿಂದ ಕಾಡುತ್ತಿದ್ದ 'ಮೆಕನಸ್‌ಗೋಲ್ಡ್' ಪರ್ವತದ ಬುಡದಲ್ಲಿಯೇ ಮಧ್ಯಾಹ್ನ 'ರಾಪೆಲಿಂಗ್' ಚಟುವಟಿಕೆ ಇತ್ತು. ಎಲ್ಲರೂ ಉತ್ಸಾಹದಿಂದ ಭಾಗವಹಿಸಿದರು.

ನಾಲ್ಕನೆಯ ದಿನ ಸುಮಾರು 100 ಮೀಟರ್ ಎತ್ತರ ಮಾತ್ರ ಏರುವ ಗುರಿಯಿದ್ದುದರಿಂದ ಬಹಳ ಸುಲಭ ಎಂದುಕೊಂಡಿದ್ದೆವು. ಆದರೆ ಇಡೀ ಚಾರಣದಲ್ಲಿ ಈ ದಿನ ಅತ್ಯಂತ ಕಷ್ಟವಾದ ಪ್ರಯಾಣವಾಗಿತ್ತು. ಸುಲಭ ಎಂದುಕೊಂಡದ್ದು ಕಷ್ಟ, ಕಷ್ಟ ಎಂದುಕೊಂಡದ್ದು ಸುಲಭ, ಇಂತಹ ಅನಿರೀಕ್ಷಿತ ತಿರುವುಗಳೇ ಜೀವನದ ತಿರುಳಲ್ಲವೇ? ಇಂದು 300 ಮೀಟರ್ ಕೆಳಗಿಳಿದು, 400 ಮೀಟರ್ ಮೇಲೇರಿದೆವು. ಕೆಳಗಿಳಿಯುವುದು ಕಷ್ಟವಾಗಿತ್ತಲ್ಲದೆ, ಹಲವು ಕಡೆ ಜಾರುತ್ತಿತ್ತು. ಕೆಲವು ಕಡೆ ಎರಡೂ ಕೈಗಳನ್ನು ಊರಿಕೊಂಡು ನಾಲ್ಕು ಕಾಲಿನ ಪ್ರಾಣಿಗಳಂತೆ ಏರಿದೆವು. ಇಂದಿನ ಕ್ಯಾಂಪ್ 'ಜಮೀರ್' ತಲುಪುವಷ್ಟರಲ್ಲಿ ಸಂಪೂರ್ಣ ನಿತ್ರಾಣರಾಗಿದ್ದೆವು.

ಇಲ್ಲಿಂದ ಹೆಡೆ ಎತ್ತಿದ ನಾಗರಹಾವಿನಂತೆ 'ದೇವರ ದಿಬ್ಬ'ದ ತುದಿಯ ದರ್ಶನವಾಗುತ್ತಿತ್ತು. ಮುಂದೆ ದೊಡ್ಡ ಕಣಿವೆ. ಎದುರಿಗೆ ಹಿಮ ತುಂಬಿಕೊಂಡ ಶಿಖರಗಳು. ಇಲ್ಲಿಂದ ಸೂರ್ಯಾಸ್ತದ ವೀಕ್ಷಣೆಯೇ ಅಪರೂಪದ ಅನುಭವ. ಮೂಡಣದ 'ದೇವರ ದಿಬ್ಬ'ದ ಹಿಮಶಿಖರಕ್ಕೆ ಪಡುವಣದಲ್ಲಿ ಮುಳುಗುತ್ತಿರುವ ಸೂರ್ಯನ ಕಿರಣಗಳು ಸ್ವರ್ಣಲೇಪಿತ ಬಣ್ಣ ತುಂಬಿದ್ದವು. ಸ್ವಲ್ಪ ಸಮಯ ಅಲ್ಲೇ ಧ್ಯಾನಕ್ಕೆ ಕುಳಿತೆ. ಪರ್ವತಗಳಿಂದ ಪಡೆದ ಚೈತನ್ಯದಿಂದ ಅಂದಿನ ದಣಿವು ಪೂರ್ಣ ಮಾಯವಾಗಿ, ಚಾರಣ ಮುಂದುವರಿಸುವ ಆತ್ಮಸ್ಥೈರ್ಯ ಮೂಡಿತು.



ಐದನೇ ದಿನ ಕೇವಲ 300 ಮೀಟರ್ ಎತ್ತರ ಏರಿ 'ಪಿಯಾಂಗ್‌ನಿರು' ಕ್ಯಾಂಪ್ ತಲುಪಿದೆವು. ಅಲ್ಲಿ ಮೊದಲ ಬಾರಿಗೆ ಕೆಂಪು ಬಣ್ಣದ ಹೂವುಗಳ ದರ್ಶನವಾಯಿತು. ಐದು ದಿನಗಳ ಶ್ರಮದ ನಂತರ 'ದೇವರ ದಿಬ್ಬ'ದ ಕಾಲಡಿಯಲ್ಲಿ ನಿಂತಾಗ, ಕಠಿಣ ತಪಸ್ಸಿನ ನಂತರ ದೇವರ ದರ್ಶನ ಪಡೆದಂತಹ ಸಂತೃಪ್ತ ಭಾವ.

ಐದು ದಿನಗಳ ಈ ಚಾರಣದ ಅಂತಿಮ ಗುರಿ 'ದೇವರ ದಿಬ್ಬ'ದ ದರ್ಶನವೇ ಆಗಿದ್ದರೂ, ಹಿಮಾಲಯ ಪರ್ವತಗಳ ಕಣಿವೆ, ಕೊರಕಲು, ಹಳ್ಳ–ದಿಣ್ಣೆಗಳನ್ನು ದಾಟಿ, ಭವ್ಯವಾದ ಮರಗಳ ಮಧ್ಯೆ ನಡೆಯುವಾಗ ನಮ್ಮತನ ತೃಣ ಮಾತ್ರವಾಗಿ ಪ್ರಕೃತಿಯ ಭಾಗವಾದ ಅನುಭವಗಳು ಆವರಿಸಿದ್ದವು. ಹಸಿರು, ಅಪರೂಪದ ಹೂವುಗಳ ಸೌಂದರ್ಯೋಪಾಸನೆ ಮಾಡುವ ಪ್ರತಿಕ್ಷಣ ಪ್ರಕೃತಿಯಿಂದ ಹೊಸ ಚೈತನ್ಯ ಪಡೆದ ಅನುಭವ. ನನ್ನ ಪಾಲಿಗೆ ಇದು ಚಾರಣ ಎನ್ನುವುದಕ್ಕಿಂತ ಆಧ್ಯಾತ್ಮಿಕ ಲೋಕದ ಅನಾವರಣದಂತಿತ್ತು.

ಕಳೆದ ಎರಡು ದಿನಗಳಿಂದ ಹೊರ ಜಗತ್ತಿನ ಸಂಪರ್ಕ ಸಂಪೂರ್ಣ ಕಡಿತವಾಗಿತ್ತು. ಸುತ್ತಲ ಕಾಡು, ಬೆಟ್ಟ–ಗುಡ್ಡ, ಹಿಮ, ಸೂರ್ಯ ಬಿಟ್ಟರೆ ಬೇರೇನೂ ಕಣ್ಣಿಗೆ ಕಾಣದ ವಾತಾವರಣದಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾಣುವ ಪರ್ವತಗಳೇ ದೇವರೆನ್ನುವ ಭಾವನೆ ಮೂಡಿ ಸಾರ್ಥಕತೆ ಪಡೆದ ಅನುಭವ.

ಈ ಕಿನ್ನರಲೋಕದ ಪಯಣ ಮುಗಿಸಿ ಹಿಂದಕ್ಕೆ ಬರುವ ಚಾರಣವನ್ನು ಆರನೇ ದಿನ ಪ್ರಾರಂಭಿಸಿದೆವು. ಜೋಪಡಿನಾಲಾ ನದಿಯ ಉದ್ದಕ್ಕೂ ಒಂದು ಗಂಟೆ ಚಾರಣ ಮಾಡಿ, ಎತ್ತರದ ಒಂದು ಬೆಟ್ಟವನ್ನು ದಾರಿಯಿಲ್ಲದ ದಾರಿಯಲ್ಲಿ ಎರಡು ಗಂಟೆ ಕಾಲ ಏರಿ ತುದಿ ಮುಟ್ಟಿ ಸುತ್ತಲ ವಿಹಂಗಮ ನೋಟ ಆಸ್ವಾದಿಸಿದೆವು. ಎರಡು ದಿನಗಳ ಹಿಂದೆ ನೋಡಿದ್ದ ವಸಿಷ್ಠ ಪರ್ವತ, ಅದರ ಹಿಂದೆ ಇರುವ 'ಹನುಮಾನ್ ದಿಬ್ಬ'ದ ದರ್ಶನವಾಯಿತು. ಮಧ್ಯಾಹ್ನ ಅಂದಿನ ಕ್ಯಾಂಪ್, 'ಊಂಚಿಂಗ್‌ಬಿಹೈ' ತಲುಪಿದಾಗ ಧ್ಯಾನಸ್ಥ ಶಿವನಂತಹ ವಸಿಷ್ಠ ಪರ್ವತ ಮತ್ತೆ ಗೋಚರಿಸುತ್ತಿತ್ತು. ಹಾವಿನ ಹೆಡೆಯಂತಹ 'ಕೋಬ್ರಾ ಪ್ಲಾಂಟ್' ಹೆಸರಿನ 'ಲಿಲ್ಲಿ' ಜಾತಿಯ ಸಸ್ಯ ಇಲ್ಲಿನ ಆಕರ್ಷಣೆಯ ಬಿಂದು. ಹಾವಿನ ಹೆಡೆಯಂತೆ ಕಾಣುತ್ತಿದ್ದ ಇದು ಎಲೆ ಮಾತ್ರ ಎಂದು ತಿಳಿದಾಗ ಪ್ರಕೃತಿಯ ವೈವಿಧ್ಯಕ್ಕೆ ಬೆರಗಾದೆವು.

ಏಳನೆಯ ದಿನ ಸುಮಾರು 6 ಗಂಟೆಗಳ ಚಾರಣದಲ್ಲಿ ಬಹಳಷ್ಟು ದೂರ ಸಮತಟ್ಟಾದ ರಸ್ತೆಯಲ್ಲಿ ಕ್ರಮಿಸಿ ಮಧ್ಯಾಹ್ನದ ಹೊತ್ತಿಗೆ ಬೇಸ್‌ಕ್ಯಾಂಪ್‌ಗೆ ಮರಳಿದೆವು. ಚಳಿಗಾಗಿ ತೊಡುತ್ತಿದ್ದ ಉಣ್ಣೆಯ ಬಟ್ಟೆ, ಟೋಪಿ, ಕೈಗವುಸುಗಳಿಲ್ಲದೆ ಹಾಗೂ ವಾರದ ಸ್ನಾನದ ಪ್ರಭಾವದಿಂದ ಒಬ್ಬರಿಗೊಬ್ಬರು ಗುರುತು ಸಿಗದೆ ಮತ್ತೆ ಪರಿಚಯಿಸಿಕೊಳ್ಳುವಂತಹ ಪ್ರಸಂಗ ಉಂಟಾಗಿತ್ತು.

ಮಾರನೆಯ ದಿನ ಬೆಳಿಗ್ಗೆ ಮನಾಲಿ ತಲುಪಿ, ಭೀಮಸೇನನ ಮೆಚ್ಚಿನ ಮಡದಿ 'ಹಿಡಿಂಬೆ'ಯ ದೇವಾಲಯ ನೋಡಲು ಹೋದೆವು. ಅದೇ ದಿನ ಸಂಜೆ ದೆಹಲಿಗೆ ಪ್ರಯಾಣ ಬೆಳೆಸಿದೆವು. ಸುಮಾರು ನಾಲ್ಕು ಗಂಟೆಗಳ ಕಾಲ ಬಿಯಾಸ್ ನದಿಯ ದಡದಲ್ಲಿಯೇ ಪಯಣ. ಬಿಯಾಸ್ ನದಿ ಕೆಲವು ಕಡೆ ಹರಿಯುತ್ತಿಲ್ಲವೇನೋ ಎಂಬಂತೆ ಶಾಂತವಾಗಿ ಮತ್ತೂ ಕೆಲವು ಕಡೆ ತನ್ನ ಇನ್ನೊಂದು ಮುಖ ತೋರಿಸುವಂತೆ, ರಭಸದಿಂದ ಬೆಟ್ಟಗುಡ್ಡಗಳಲ್ಲಿ, ಹಳ್ಳಕೊಳ್ಳ, ಕಲ್ಲುಬಂಡೆಗಳನ್ನು ಲೆಕ್ಕಿಸದೆ ಸಾಗಿ ತನ್ನ ಗಮ್ಯವನ್ನು ಸೇರುವ 'ಜೀವನದಿ'ಯಾಗಿ ಹರಿಯುತ್ತಾ, ಏರಿಳಿತಗಳ ಜೀವನ ಪಯಣದ ನಮ್ಮ 'ಪ್ರಾಣನದಿ'ಯ ಪ್ರತೀಕದಂತಿತ್ತು.

ಪ್ರತಿಕ್ರಿಯಿಸಿ: **feedback@sudha.co.in**